
## ಪುಸ್ತಕ ಪರಿಚಯ


ಕೃತಿ : **ಕಥಾ ಚಿಂತನ – ಮನೋ ಮಂಥನ**
ಲೇಖಕರು: **(ಮೂಲ) ಪಂಡಿತ ಶ್ರೀರಾಮ ಶರ್ಮಾ ಆಚಾರ್ಯ**
ಅನುವಾದ: **ಮಾತಾ ತ್ಯಾಗಮಯೀ**
ಪ್ರಕಾಶಕರು: **ವಿವೇಕಹಂಸ ಪ್ರಕಾಶನ, ನಂ. 569, 3ನೇ ಅಡ್ಡರಸ್ತೆ, 17ನೇ ಮುಖ್ಯರಸ್ತೆ, ಶ್ರೀನಿವಾಸನಗರ 2 ನೇ ಹಂತ, ಬೆಂಗಳೂರು– 50**
ಪುಟಗಳು : **14 + 226** ಬೆಲೆ : **75.00**




ಹಿಂದೀ ಭಾಷೆಯಲ್ಲಿ ಪಂಡಿತ ಶ್ರೀರಾಮ ಶರ್ಮಾ ಆಚಾರ್ಯ ಅವರು ರಚಿಸಿರುವ 'ಪ್ರೇರಣಾ ಪ್ರದ ದೃಷ್ಟಾಂತ' ಎಂಬ ನೀತಿಕತೆಗಳ ಬೃಹತ್ ಸಂಪುಟದಿಂದ ಆಯ್ದ ಕಥೆಗಳ ಅನುವಾದ ಸಂಕಲನವೇ '**ಕಥಾ ಚಿಂತನ – ಮನೋಮಂಥನ.**' ವಿಚಾರಪ್ರದವೂ ಸ್ಫೂರ್ತಿದಾಯಕವೂ, ಮೌಲ್ಯವರ್ಧಕವೂ ಆದ ಕಥೆಗಳನ್ನು ಸರಳ, ಸುಂದರ ಕನ್ನಡದಲ್ಲಿ ಅನುವಾದಿಸಿ, ಸಂಕಲಿಸಿದವರು ಚಳ್ಳಕೆರೆಯ ಶ್ರೀಶಾರದಾಶ್ರಮದ ಮುಖ್ಯಸ್ಥರಾದ ಮಾತಾ ತ್ಯಾಗಮಯೀ ಅವರು. ಈ ಕೃತಿಯನ್ನು ಅನುವಾದ ಮಾಡಲು ಪ್ರೇರಣೆ ನೀಡಿದ ಸ್ವಾಮಿ ಜಗದಾತ್ಮಾನಂದಜಿಯವರು ಇದಕ್ಕೆ ಒಪ್ಪುವಂತೆ ಸುಂದರವಾದ ಮುನ್ನುಡಿಯನ್ನು ಬರೆದು 'ಶುಭಾಶಂಸನ'ಗೈದಿದ್ದಾರೆ. ಒಂಬತ್ತು ಭಾಗಗಳಲ್ಲಿ ಈ ಕಥೆಗಳನ್ನು ವರ್ಗೀಕರಿಸಿ, ಈ ಭಾಗಗಳಿಗೆ 'ಕರ್ತವ್ಯಪರಾಯಣತೆ', ಸೇವೆ ಮತ್ತು ಪರೋಪಕಾರ', 'ತ್ಯಾಗ ಮತ್ತು ಬಲಿದಾನ', 'ಪ್ರೇಮ, ಕರುಣೆ ಮತ್ತು ಔದಾರ್ಯ' , 'ಶೀಲ, ಸದಾಚಾರ ಮತ್ತು ಸಚ್ಚಾರಿತ್ರ್ಯ' 'ಧರ್ಮಸೂಕ್ಷ್ಮ', 'ಸತ್‌ಪ್ರವೃತ್ತಿಗಳು', 'ದೈವಶ್ರದ್ಧೆ ಮತ್ತು ಆಸ್ತಿಕತೆ' ಎಂಬ ಶೀರ್ಷಿಕೆ ನೀಡಲಾಗಿದೆ. ಆಯಾ ವಿಷಯಗಳಿಗನುಗುಣವಾಗಿ ಕಥೆಗಳ ಮೂಲಕ ಒಂದೊಂದು ಮೌಲ್ಯವನ್ನು ಬಿಂಬಿಸುವುದು ಇಲ್ಲಿನ ವೈಶಿಷ್ಟ್ಯ. ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಹಾಗೂ ಆಧುನಿಕ ಸಂದರ್ಭಗಳಲ್ಲಿ ಬರುವ ಘಟನೆಗಳು ಹಾಗೂ ಅನೇಕ ಸತ್ಯಘಟನೆಗಳು ಇಲ್ಲಿದ್ದು, ಸಹಜ ಶೈಲಿಯ ಸುಂದರ ನಿರೂಪಣೆಯಿಂದ ಕೂಡಿವೆ ಈ ಕಥೆಗಳು. ಇವು ನೇರವಾಗಿ ಓದುಗರ ಮನಸ್ಸನ್ನು ಸೂರೆಗೊಳ್ಳುತ್ತವೆ. ಎಲ್ಲ ವಯಸ್ಸಿನ ಓದುಗರಿಗೂ ಮುದ ನೀಡುವ ಈ ಕೃತಿ ಸಂಗ್ರಹಯೋಗ್ಯವಾದುದು. ಕಥೆಗಳಿಗೆ ಯೋಗ್ಯವಾದ ರೇಖಾಚಿತ್ರಗಳಿದ್ದಿದ್ದರೆ ಇದು ಇನ್ನಷ್ಟು ಆಕರ್ಷಕವಾಗುತ್ತಿತ್ತು. ಮುಂದಿನ ಮುದ್ರಣಗಳಲ್ಲಿ ಇದರತ್ತ ಗಮನ ಹರಿಸಬಹುದು ಎಂಬುದು ನಮ್ಮ ಸಲಹೆ.

–ಶ್ರೀ

# ಯುವಚೇತನ



ನಮ್ಮ ದೇಶಕ್ಕೆ ತಮ್ಮ ಸರ್ವಸ್ವವನ್ನೂ ಧಾರೆ ಎರೆಯಬಲ್ಲಂತಹ ವ್ಯಕ್ತಿಗಳಿದ್ದರೆ, ಆಪಾದಮಸ್ತಕಪರ್ಯಂತ ನಿಃಸ್ಪೃಹರಾಗಿದ್ದರೆ, ಆಗ ಭರತಖಂಡ ಸರ್ವತೋಮುಖವಾಗಿ ಮಹಿಮಾನ್ವಿತವಾಗುವುದು. ಭರತಖಂಡದ ಜನಸಾಮಾನ್ಯರನ್ನು ಮೇಲಕ್ಕೆ ಎತ್ತುವುದಕ್ಕೆ ಬದ್ಧಕಂಕಣರಾದವರೊಂದಿಗೆ ಕೆಲಸ ಮಾಡಿ, ಅವರನ್ನು ಜಾಗೃತಗೊಳಿಸಿ, ಅವರನ್ನು ಒಂದುಗೂಡಿಸಿ, ಅವರಲ್ಲಿ ತ್ಯಾಗದ ಭಾವನೆ ಮೂಡುವಂತೆ ಮಾಡಿ, ಇಂತಹ ಯುವಕರ ಮೇಲೆಯೆ ಭರತಖಂಡ ನಿಂತಿರುವುದು.

ನಮ್ಮ ದೇಶಕ್ಕೆ ಇಂದು ಬೇಕಾಗಿರುವುದು ಕಬ್ಬಿಣದಂತಹ ಮಾಂಸಖಂಡಗಳು, ಉಕ್ಕಿನಂತಹ ನರಗಳು ಇರುವ ವ್ಯಕ್ತಿಗಳು. ದುರ್ದಮ್ಯವಾದ ಪ್ರಚಂಡ ಇಚ್ಛಾಶಕ್ತಿಯಿಂದ ಅವರು ಕೂಡಿರಬೇಕು. ಅವರು ಪ್ರಪಂಚದ ರಹಸ್ಯವನ್ನೆಲ್ಲ ಭೇದಿಸಿ ತಮ್ಮ ಇಚ್ಛೆಯನ್ನು ನೆರವೇರಿಸಿಕೊಳ್ಳುವವರಾಗಿರಬೇಕು. ನಮಗಿಂದು ಶಕ್ತಿ ಬೇಕು. ಶಕ್ತಿ ಬೇಕೆಂದು ಪದೇಪದೇ ಹೇಳುತ್ತೇನೆ. ಉಪನಿಷತ್ತುಗಳು ಶಕ್ತಿಯ ಮಹಾಗಣಿ. ಪ್ರಪಂಚಕ್ಕೆಲ್ಲ ದಾನಮಾಡುವಷ್ಟು ಶಕ್ತಿ ಅದರಲ್ಲಿದೆ. ಇಡೀ ಪ್ರಪಂಚವನ್ನೇ ಅದರಿಂದ ಜಾಗ್ರತಗೊಳಿಸಬಹುದು. ಉಪನಿಷತ್ತಿನಿಂದ ಜನರ ಮೌಢ್ಯದ ಮೇಲೆ ಸಿಡಿಮದ್ದಿನಂತೆ ಬೀಳುವ ಒಂದು ಪದವಿದ್ದರೆ, ಅದೇ '**ಅಭೀಃ**' (ನಿರ್ಭಯತೆ) ಎಂಬ ಪದ. ಜನರಿಗೆ ಬೋಧಿಸುವ ಏಕಮಾತ್ರ ಧರ್ಮವೇ ನಿರ್ಭಯತೆ ಎಂಬುದು. ಜಾಗ್ರತರಾಗಿ ಎದ್ದು ನಿಲ್ಲಿ, ದೌರ್ಬಲ್ಯದ ಸಂಮೋಹನಾಸ್ತ್ರದಿಂದ ಪಾರಾಗಿ. ಯಾರೂ ನಿಜವಾಗಿಯೂ ದುರ್ಬಲರಲ್ಲ. ಯಾರಿಗಾಗಿ ಹೆದರುವುದು? ಆತ್ಮ ಅನಂತವಾದುದು, ಸರ್ವವ್ಯಾಪಿಯಾದುದು. ಸರ್ವಶಕ್ತಿಮಯವಾದುದು. ನೀವು ಆ ಶಕ್ತಿಮಯ ಆತ್ಮ, ಎದ್ದು ನಿಂತು ನಿಮ್ಮಲ್ಲಿರುವ ಪರಬ್ರಹ್ಮವನ್ನು ವ್ಯಕ್ತಗೊಳಿಸಿರಿ. ಯಾರನ್ನೂ ಅಲ್ಲಗಳೆಯಬೇಡಿ. ಸುಪ್ತಾವಸ್ಥೆಯಲ್ಲಿರುವ ಆತ್ಮನನ್ನು ಕೂಗಿ ಕರೆಯಿರಿ. ನೋಡಿ ಅವನು ಹೇಗೆ ಏಳುತ್ತಾನೆ ಎಂಬುದನ್ನು. ಆಗ ಶಕ್ತಿ ಬರುವುದು, ಪರಾಕ್ರಮ ಬರುವುದು, ಸಾಧುಸ್ವಭಾವ ಬರುವುದು, ಪರಿಶುದ್ಧತೆ ಬರುವುದು. *('ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ' ಯಿಂದ)*

# ಆಧ್ಯಾತ್ಮಿಕ ಸಂಭಾಷಣೆ



## ಸ್ವಾಮಿ ಭೂತೇಶಾನಂದಜೀಯವರೊಂದಿಗೆ

ಕನ್ನಡ ಅವತರಣಿಕೆ : ಸ್ವಾಮಿ ಮಂಗಳಾತ್ಮಾನಂದ

**ಪ್ರಶ್ನೆ:** ಮಹಾರಾಜರೆ, 'ನಿನ್ನಲ್ಲಿ ಸೇವಾಬುದ್ಧಿ ಉಂಟಾದರೆ ದೇಹ ಬುದ್ಧಿ ಕಡಿಮೆ ಆಗುತ್ತದೆ' ಎಂದು ತಾವು ಹೇಳಿದ್ದೀರಿ.

**ಮಹಾರಾಜ್:** ನೋಡು, ಯಾವಾಗ ಮನುಷ್ಯ ಗಾಢವಾದ ಧ್ಯಾನ ದಲ್ಲಿ ಮುಳುಗುತ್ತಾನೋ ಆಗ ವಿಚಾರ, ವ್ಯವಹಾರ ಜಗತ್ತುಗಳು ಕರ್ಮವಿರೋಧಿಯಾಗುತ್ತವೆ. ಧ್ಯಾನಸಿದ್ಧಿಯಾದಾಗ ಇಂದ್ರಿಯ ಗಳೆಲ್ಲವನ್ನೂ ಮನಸ್ಸಿನ ಜೊತೆಗೆ ಲಯಗೊಳಿಸಬೇಕು. ಆಗಲೇ ಕರ್ಮವಿರೋಧವಾಗುತ್ತದೆ. ಆಗ ಕರ್ಮದಿಂದ ಏನೂ ನಡೆಯದು. ಇಂದ್ರಿಯಗಳಿಗೂ ಕರ್ಮವಿರುತ್ತದೆ. ಆದರೆ ಸಾಮಾನ್ಯ ಜನರ ಕರ್ಮಕ್ಕೂ, ಧ್ಯಾನಕ್ಕೂ ವ್ಯತ್ಯಾಸವಿರುವುದರಿಂದ ಧ್ಯಾನವು ಅಂತಹ ವರಿಗೆ ಬಹುದೂರ. ಶ್ರೀರಾಮಕೃಷ್ಣರು ಸಮಾಧಿ ಅವಸ್ಥೆಯಲ್ಲಿದ್ದಾಗ, ಅವರಿಂದ ಏನಾದರೂ ಕೆಲಸ ಮಾಡಲು ಆಗುತ್ತಿತ್ತೆ? ಮಾತೂ ಹೊರಡುತ್ತಿರಲಿಲ್ಲ. ಆದ್ದರಿಂದ ಆ ಅವಸ್ಥೆಯಲ್ಲಿ ಯಾವ ಕೆಲಸವೂ ನಡೆಯದು. ಎಲ್ಲಿ ತನಕವೆಂದರೆ ನಿಃಸ್ವಾರ್ಥ ಕರ್ಮವನ್ನೂ ಮಾಡ ಲಾಗದು. ಈ ಅವಸ್ಥೆಯಲ್ಲಿ ಕರ್ಮವಿರೋಧವಾಗುತ್ತದೆ. ಆ ಅವಸ್ಥೆ ಬರುವ ತನಕ ಕರ್ಮ ವಿರೋಧವಿರುವುದಿಲ್ಲ. ವಿಚಾರಕ್ಕೂ ವಿಚಾರಿಸ ಲ್ಪಡುವ ವಿಷಯಕ್ಕೂ ಎಲ್ಲಿಯತನಕ ವಿರೋಧ ಕಾಣುವುದಿಲ್ಲವೋ ಅಲ್ಲಿ ತನಕ ಜನಸೇವೆ ಮಾಡಲು ವಿರೋಧವೇನಿದೆ? ಅನಂತರದ ವಿರೋಧ ಎಲ್ಲಿಂದ ಬರುವುದು? ಹೀಗೆ ಹೇಳುತ್ತಾರೆ – ಯಾವ ಕರ್ಮವು ಮನುಷ್ಯನನ್ನು ಸಂಕುಚಿತಗೊಳಿಸುವುದೋ, ಅದರ ಜೊತೆಗೆ ಕರ್ಮದ ವಿರೋಧವಿದೆ. (ಅಂದರೆ ಸ್ವಾರ್ಥಬುದ್ಧಿಯಿಂದ ಕೂಡಿದ ಕರ್ಮಕ್ಕೆ ವಿರೋಧವಿದೆ.) ಆದರೆ ನಿಃಸ್ವಾರ್ಥ ಕರ್ಮ ದೊಂದಿಗೆ ಯಾವ ವಿರೋಧವೂ ಇಲ್ಲ. ಸ್ವಾಮೀಜಿಯವರೂ ಈ ಮಾತನ್ನು ಹೇಳುತ್ತಾರೆ, ಶಂಕರಾಚಾರ್ಯರೂ ಈ ವಿಷಯವಾಗಿ ಸ್ಪಷ್ಟವಾದ ಮಾತನ್ನು ಹೇಳಿದ್ದಾರೆ. ಆಚಾರ್ಯರು ಘಂಟಾಘೋಷ ವಾಗಿ ಹೇಳಿದ್ದಾರೆ: ಯಾವ ಕರ್ಮವು ಸಕಾಮವೋ, ಅದು ಕರ್ಮದ ಜೊತೆ ವಿರೋಧ ಹೊಂದಿರುತ್ತದೆ. ಕರ್ಮ ಮಾಡುತ್ತ ಮಾಡುತ್ತ ಆತನ ಮನಸ್ಸಿನಲ್ಲಿ ಒಂದು ವೇಳೆ ನಿಷ್ಕಾಮಭಾವನೆ ಬಂದರೆ, ಆ ಆತನಿಗೆ ಕರ್ಮವಿರೋಧ ಉಳಿಯುವುದಿಲ್ಲ.

**ಪ್ರಶ್ನೆ:** ಅಂದರೆ – ಹಿಂದಿನ ಕರ್ಮವನ್ನೇ ಈಗ ನಿಷ್ಕಾಮಕರ್ಮವಾಗಿ ಮಾಡಲಾಗುವುದು ಎಂದರ್ಥ. *(ಅರ್ಥಾತ್ ಎಲ್ಲಿಯತನಕ ಸಕಾಮ ಕರ್ಮ ಮಾಡುತ್ತಿರುವೆವೋ, ಅರಿವು ಬಂದ ಮೇಲೆ ಅದೇ ಕರ್ಮ ನಿಷ್ಕಾಮವಾಗಿ ಮುಂದುವರಿಯುತ್ತದೆ.)*

**ಮಹಾರಾಜ್:** ಉದಾಹರಣೆಗೆ ಒಬ್ಬ ಯಜ್ಞ ಮಾಡುತ್ತಾನೆ, ಯಜ್ಞಕ್ಕೆ ಆಹುತಿ ನೀಡುತ್ತಿದ್ದಾನೆ. ಸಕಾಮ ಭಾವದಿಂದ ಅವನು ಆಹುತಿ ನೀಡುತ್ತಿದ್ದಾನೆ. ಹಾಗೆ ಮಾಡುತ್ತಾ ಕ್ರಮೇಣ ಆತನಲ್ಲಿ ಸಕಾಮಭಾವನೆ ಹೊರಟು ಹೋಗುತ್ತದೆ. ಆದರೆ ಯಾವುದನ್ನು ಆರಂಭ ಮಾಡಿದ್ದಾನೋ, ಮಾಡಲ್ಪಟ್ಟ ಕರ್ಮವು ಅಲ್ಲಿಗೆ ಮುಗಿಯಿತು. ಈ ಕರ್ಮ ಯಾವ ಬಗೆಯದು? ಅದು ನಿಷ್ಕಾಮಕರ್ಮ. ಯಾವಾಗ ಆತನ ಮನಸ್ಸಿನಲ್ಲಿದ್ದ ಕಾಮನೆಗಳು ಹೊರಟುಹೋದವೋ, ಆಗಲೇ ಅದು ನಿಷ್ಕಾಮಕರ್ಮವಾಯಿತು. ನಿಷ್ಕಾಮಕರ್ಮ ದೊಂದಿಗೆ ಜ್ಞಾನಕ್ಕೆ ವಿರೋಧವಿಲ್ಲ. ಕಾರಣ, ನಿಷ್ಕಾಮಕರ್ಮವು ನಿನ್ನನ್ನು ಸಂಕುಚಿತನನ್ನಾಗಿ ಮಾಡದು. ದೇಹದ ಜೊತೆಗೆ ನಿನ್ನನ್ನು ಬಂಧಿಸದು. ಹೀಗಾಗಿ ನಿಷ್ಕಾಮಕರ್ಮಕ್ಕೂ ಜ್ಞಾನಕ್ಕೂ ಸಂಘರ್ಷ ಬರುವುದಿಲ್ಲ. ಶಂಕರಾಚಾರ್ಯರು ಕೂಡ ವಿರೋಧ ವಿರುವುದು ಕರ್ಮದ ಅಧೀನದಲ್ಲಿ ಎನ್ನುತ್ತಾರೆ.

ಇನ್ನು ನಿದಿಧ್ಯಾಸನದಲ್ಲಿ ಸ್ವಾಭಾವಿಕವಾಗಿಯೇ ಕರ್ಮ ವಿರೋಧವಿರುವುದಿಲ್ಲ. ನಿದಿಧ್ಯಾಸನವೆಂದರೆ ಮನಸ್ಸಿನಾಚೆಗೆ – ವಿಚಾರದಾಚೆಗೆ – ಯಾವ ಸಿದ್ಧಾಂತವಿರುವುದೋ ಅದರಲ್ಲಿ ಮುಳುಗಿ ಹೋಗುವುದು. ಆಗ ಅಲ್ಲಿ ಕರ್ಮವುಂಟಾಗದು. ಎಲ್ಲಿ ವಿಕ್ಷೇಪ (ಚಂಚಲಸ್ವಭಾವ) ವಿರುವುದೋ, ಅಲ್ಲಿ ಶ್ರೇಯವಸ್ತು (ಮುಕ್ತಿ) ಇರುವುದು ನಮಗೆ ಕಾಣುವುದಿಲ್ಲ. ಖಂಡಿತ ಅಲ್ಲಿ ವಿರೋಧವಿರುವುದಿಲ್ಲ. ಇದೇ – 'ವಿಕ್ಷೇಪ ಹೋತಾ ಹೈ.' ಇದರರ್ಥ ತೋರಿಕೆಗೆ ವಿರೋಧವಿರುವ ಹಾಗೆ ಕಂಡುಬರುತ್ತದೆ. ಈ ವಿರೋಧದ ವಿಷಮತೆಯಿಂದಾಗಿ ನಾವು ನಮಗೆ ಉಚಿತವಾಗಿರುವ humanity ಯಿಂದ ಚ್ಯುತರಾಗುತ್ತೇವೆ. ಇದೇ ಸಿದ್ಧಾಂತ. ಇಲ್ಲಿ ವಿರೋಧವೆಲ್ಲಿ ಬಂತು? ಎಲ್ಲಿ ಸಮಾಧಿಸ್ಥನಾಗುವೆನೋ, ಎಲ್ಲಿ ವ್ಯವಹಾರವನ್ನೂ ಮಾಡುತ್ತೇನೋ, ಅಲ್ಲಿ ವಿರೋಧವಿರುವುದಿಲ್ಲ.

**ಪ್ರಶ್ನೆ:** ಶಂಕರಾಚಾರ್ಯರ ಹೇಳಿಕೆಯಂತೆ, ನಿಷ್ಕಾಮಕರ್ಮದ ಮೂಲಕ ಜ್ಞಾನ-ನಿಷ್ಠೆಯ ಲಾಭವುಂಟಾಗುತ್ತದೆ.

**ಮಹಾರಾಜ್:** ಜ್ಞಾನ-ನಿಷ್ಠೆ ಸಿದ್ಧಿಸಿದರೆ, ಆತನಿಗೆ ಜ್ಞಾನದಲ್ಲಿ ಸ್ಥಿತಿಯುಂಟಾಗುತ್ತದೆ.

**ಪ್ರಶ್ನೆ:** ಅನಂತರ ಜ್ಞಾನದ ಅಂತರಂಗ ಸಾಧನೆ ನಡೆಯುವುದು.

**ಮಹಾರಾಜ್:** ಅಂತರಂಗ ಸಾಧನೆ ಎಂದರೆ ಬ್ರಹ್ಮಾಕಾರ ವೃತ್ತಿ. ವಿಚಾರಮಾರ್ಗಿಗಳು ಇದನ್ನೆಲ್ಲ **ವೃತ್ತಿ** ಎನ್ನುವರು.

**ಪ್ರಶ್ನೆ:** ಹಾಗಲ್ಲ, ಅದಕ್ಕೆ ನಿದಿಧ್ಯಾಸನ ಎನ್ನುವರು.

**ಮಹಾರಾಜ್:** ನಿದಿಧ್ಯಾಸನವೆಂದರೆ ಧ್ಯಾನ. ಧ್ಯಾನವೆಂದರೆ– ನಿನ್ನೆಲ್ಲ ಇಂದ್ರಿಯವೃತ್ತಿಗಳನ್ನು ನಿರೋಧಿಸುವುದು.

**ಪ್ರಶ್ನೆ:** ಈ ಅವಸ್ಥೆಯಲ್ಲಿ ಶ್ರವಣ, ಮನನಗಳಿಗೆ ಅವಕಾಶವಿಲ್ಲವೆ?